# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 881

ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.

ಉತ್ತರಿಸಬೇಕಾದ ದಿನಾಂಕ : 19.08.2025

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದ ರೈತರಿಗೆ ನೆರವಾಗಬೇಕಾದ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘ (ಹಾಪ್‌ಕಾಮ್ಸ್) ನಷ್ಟದಲ್ಲಿದ್ದು, ಸಾಲದ ಸುಳಿಗೆ ಸಿಲುಕಿರುವುದು ನಿಜವೇ ? | ನಷ್ಟದಲ್ಲಿರುವುದಿಲ್ಲ.<br>ದೈನಂದಿನ ವ್ಯವಹಾರವು ಲಾಭದಲ್ಲಿರುತ್ತದೆ. ಆದರೆ, ಬೆಂಗಳೂರು ಹಾಪ್‌ಕಾಮ್ಸ್ ಸಂಸ್ಥೆಯಲ್ಲಿ ಕಳೆದ 4-5 ವರ್ಷಗಳಿಂದ ನಿವೃತ್ತಿ ನೌಕರರ ಸಂಖ್ಯೆ ಹೆಚ್ಚಾಗಿದ್ದು, ಇದುವರೆವಿಗೂ 268 ಸಂಖ್ಯೆಯ ಸಿಬ್ಬಂದಿಗಳು ನಿವೃತ್ತಿ/ ರಾಜೀನಾಮೆ/ ನಿಧನ ಹೊಂದಿರುತ್ತಾರೆ. ಸಂಸ್ಥೆಯಲ್ಲಿ ಪ್ರಾರಂಭಿಕ ಸಾಲುಗಳಿಂದ ನಿವೃತ್ತಿ ನೌಕರರಿಗೆ ಗ್ರಾಚ್ಯುಟಿ ಪಾವತಿಸಲು ಯಾವುದೇ ಮೊತ್ತ ಕಾಯ್ದಿರಿಸದಿರುವ ಹಿನ್ನೆಲೆಯಲ್ಲಿ, ಸಂಸ್ಥೆಯ ವಹಿವಾಟಿನ ಲಾಭಾಂಶದಲ್ಲಿ ಅವರಿಗೆ ಆರ್ಥಿಕ ಸೌಲಭ್ಯಗಳನ್ನು ಪಾವತಿಸಲು ಅವಕಾಶ ಮಾಡಿಕೊಂಡ ಹಿನ್ನೆಲೆಯಲ್ಲಿ ನಷ್ಟ ಉದ್ಭವಿಸಿರುತ್ತದೆ. ದುಡಿಯುವ ಬಂಡವಾಳವಾಗಿ ಸಾಲ ಪಡೆಯಲಾಗಿದೆ. |
| (ಆ) | ಇದ್ದಲ್ಲಿ ನಷ್ಟಕ್ಕೆ ಸಿಲುಕಲು ಹಾಗೂ ಸಾಲ ಪಡೆಯಲು ಕಾರಣವಾದ ಅಂಶಗಳೇನು ? | ನಿವೃತ್ತಿ ನೌಕರರಿಗೆ ಸಂಸ್ಥೆಯಲ್ಲಿ ಪ್ರಸ್ತುತವಿರುವ ದುಡಿಯುವ ಬಂಡವಾಳ ಮತ್ತು ಲಾಭಾಂಶದಿಂದ ರೂ.8.00 ಕೋಟಿಗಿಂತ ಹೆಚ್ಚು ಮೊತ್ತವನ್ನು ಗ್ರಾಚ್ಯುಟಿ ರೂಪದಲ್ಲಿ ನೀಡಿದ್ದು, ಇದರಿಂದಾಗಿ ದುಡಿಯುವ ಬಂಡವಾಳದ ಕೊರತೆಯಾಗಿದ್ದು, ಸರ್ಕಾರದಿಂದ 2024-25ನೇ ಸಾಲಿನಲ್ಲಿ ಸಾಲ ಪಡೆದಿದೆ. |

| | | |
|---|---|---|
| (ಇ) | ಎಷ್ಟು ಮೊತ್ತದ ಸಾಲವನ್ನು ಎಷ್ಟು ಬಡ್ಡಿ ದರಕ್ಕೆ ಪಡೆಯಲಾಗಿದೆ; | ಸರ್ಕಾರದಿಂದ ದುಡಿಯುವ ಬಂಡವಾಳಕ್ಕಾಗಿ ರೂ. 15 ಕೋಟಿಗಳನ್ನು ಸಾಲವಾಗಿ ಪಡೆದಿದೆ. ಇದಕ್ಕೆ ವಾರ್ಷಿಕ ಶೇ.10.25 ರಷ್ಟು ಬಡ್ಡಿ ವಿಧಿಸಲಾಗಿರುತ್ತದೆ. |
| (ಈ) | 300 ಕ್ಕೂ ಹೆಚ್ಚು ಇದ್ದ ಮಾರಾಟ ಮಳಿಗೆಗಳು 180 ಕ್ಕೆ ಕುಸಿಯಲು ಕಾರಣಗಳೇನು; | ಕಾರಣಗಳು ಕೆಳಕಂಡಂತಿವೆ,<br>I. ಸಂಸ್ಥೆಯಲ್ಲಿ ಹೆಚ್ಚಿನ ಸಂಖ್ಯೆಯ ನೌಕರರು ನಿವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ನೌಕರರ ಕೊರತೆ ಉಂಟಾಗಿರುತ್ತದೆ.<br>II. ಬೆಂಗಳೂರಿನ ಪ್ರತಿಷ್ಠಿತ ಮಾಲ್‌ಗಳು ಹಾಗೂ ಖಾಸಗಿ ವ್ಯಾಪಾರಸ್ಥರಿಂದ ತೀವ್ರ ವ್ಯಾಪಾರ ಪೈಪೋಟಿ ಉಂಟಾಗಿರುತ್ತದೆ. ಜೊತೆಗೆ, ಕೆಲವು ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ, ಮೆಟ್ರೋ ನಿರ್ಮಾಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ.<br>III. ಕೆಲವು ಪ್ರದೇಶಗಳಲ್ಲಿ, ಜನಸಂದಣಿ ಕಡಿಮೆ ಇರುವ ಕಾರಣ, ಹೆಚ್ಚು ವ್ಯಾಪಾರ ವಹಿವಾಟು ನಡೆಯದೇ ಇರುವ ಸ್ಥಳಗಳಲ್ಲಿ ಮಳಿಗೆಗಳನ್ನು ಮುಚ್ಚಲಾಗಿದೆ.<br>IV. ಖಾಸಗಿಯವರು ತಳ್ಳುವ ಗಾಡಿಗಳು ಹಾಗೂ ಬೀದಿ ಬದಿಯಲ್ಲಿ ಹೆಚ್ಚಿನ ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ಹಾಪ್ ಕಾಮ್ಸ್ ಮಳಿಗೆಗಳ ವ್ಯಾಪಾರ ವಹಿವಾಟು ಕಡಿಮೆಯಾಗಿರುತ್ತದೆ. |
| (ಉ) | ಸರ್ಕಾರ ಹಾಪ್ ಕಾಮ್ಸ್‌ನ್ನು ಖಾಸಗಿ ಅವರಿಗೆ ವಹಿಸಿ ಕೊಡಲು ಮುಂದಾಗಿದೆಯೇ? | ಇಲ್ಲ. |

ಸಂಖ್ಯೆ: HORTI 363 HGM 2025

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು